**9**

# ದೇವರ ಆತ್ಮ

*"ಭೂಮಿಯು ನಿರಾಕಾರವಾಗಿಯೂ ಬರಿದಾಗಿಯೂ ಇತ್ತುಣಿ ಆದಿಸಾಗರದ ಮೇಲೆ ಕತ್ತಲಿತ್ತುಣಿ ದೇವರಾತ್ಮವು ಜಲಗಳ ಮೇಲೆ ಚಲಿಸುತ್ತಿತ್ತು" (ಆದಿಕಾಂಡ 1:2).*

*Ruach 'Elohim* "ದೇವರ ಆತ್ಮವು" ಸೃಷ್ಟಿಯ ಸಮಯದಲ್ಲಿ ಜಲಗಳ ಮೇಲೆ ಚಲಿಸುತ್ತಿತ್ತೆಂದು ಆದಿಕಾಂಡ 1:2 ಹೇಳುತ್ತದೆ. *Ruach 'Elohim* ಪದಗಳ ಅರ್ಥವನ್ನು ದೇವತ್ವದ ಈ ಸದಸ್ಯನಿಗೆ ಉಲ್ಲೇಖದಂತೆ ಅಧ್ಯಯನ ಮಾಡೋಣ.

## *RUACH* ಪದದ ಅರ್ಥ

ಅದರ ಸಂದರ್ಭಾನುಸಾರವಾಗಿ *ruach* ಪದಕ್ಕೆ ಭಿನ್ನವಾದ ಅರ್ಥಗಳಿರುವವು. ಹೆಚ್ಚಾದ ಭಾಷಾಂತರಗಳು *ruach*ನ್ನು "ಆತ್ಮ" ಎಂದು ಆದಿಕಾಂಡ 1:2ರಲ್ಲಿ ಹೇಳಿದೆ. "ಉಸಿರಾಡಲು" ಎಂಬ ಅರ್ಥವುಳ್ಳ ಕ್ರಿಯಾಪದದಿಂದ ಈ ಪದವು ಬಂದಿರುತ್ತದೆ. ನಾಮಪದ ರೂಪವು ಕೆಲವು ಸಲ "ಉಸಿರು" (ಆದಿಕಾಂಡ 6:17ಣಿ ಕೀರ್ತನೆ 146:4)[1] ಕೆಲವುಸಲ "ಗಾಳಿ" (ಯೋಬ 41:16), ಕೆಲವು ಸಲ "ವಾಯು" (ಆದಿಕಾಂಡ 8:1) ಹಾಗೂ ಕೆಲವು ಸಲ "ಆತ್ಮ" (ಕೀರ್ತನೆ 31:5) ಎಂದು ಅರ್ಥ ಕೊಡುತ್ತದೆ.

ನ್ಯೂ ಜ್ಯೂಯಿಶ್ ಆವೃತ್ತಿಯು *Ruach 'Elohim* ಎಂಬ ಮೋಶೆಯ ಮಾತನ್ನು "ದೇವರಿಂದ ಗಾಳಿ" ಎಂಬಂತೆ ಹೇಳುತ್ತದೆ. "ಆತ್ಮ" ಎಂಬ ಪದವು ಖಚಿತವಲ್ಲದ ಭಾಷಾಂತರವಾಗಿದೆಯೆಂದಲ್ಲ, ಆದರೆ ಯೆಹೂದ್ಯರು ಮತ್ತು ಇತರರು, ಪರಿಶುದ್ಧಾತ್ಮನು "ದೈವತ್ವದ ಐಕ್ಯತೆಯಲ್ಲಿ ತಂದೆಯೊಂದಿಗೂ ಕುಮಾರನೊಂದಿಗೂ" ಹಂಚಿಕೊಳ್ಳುತ್ತಾನೆಂಬುದನ್ನು ನಂಬದಿರುವ ಕಾರಣದಿಂದ ಇದು ಮಾಡಲ್ಪಟ್ಟಿದೆಯೆಂದು ಭಾಷಾಂತರ ಮುಖ್ಯ ಸಂಪಾದಕರಾದ ಹ್ಯಾರೀ ಎಮ್. ಓರ್ಲಿನಸ್ಕಿ ಹೇಳಿದ್ದಾರೆ. "ಆತ್ಮ" ಎಂಬ ಪದವು "ಕ್ರೈಸ್ತ ಅರ್ಥವಿವರಣೆ" ಯಾಗಿರುವದರಿಂದ ತಿರಸ್ಕರಿಸಲ್ಪಟ್ಟಿದೆಣಿ ಹಾಗೂ "ಸೃಷ್ಟಿಯ ಬಗ್ಗೆ ಬೈಬಲಿನ ವಿಷಯವು ಪುರಾತನ ಪೌರಸ್ತ್ಯ ಹಿನ್ನಲೆಯ" ಕಾರಣದಿಂದ "ಗಾಳಿ" ಎಂಬ ಪದವು ಉಪಯೋಗಿಸಲ್ಪಡಲು ಅಪೇಕ್ಷಿಸಲ್ಪಟ್ಟಿತು ಎಂದು ಸಂಪಾದಕನು ಹೇಳಿದ್ದಾನೆ. ಹೀಗಿದ್ದರೂ *Ruach 'Elohim* ಮಾತಿನ ಬೈಬಲಿನ ಉಪಯೋಗವನ್ನು ಅಲಕ್ಷಿಸಿ ಪೌರಸ್ತ್ಯದಲ್ಲಿಯ ದಂತ ಕಥೆಗಳನ್ನು ಮೆಚ್ಚಿಕೊಳ್ಳುವುದು ಅತಿಯಾದ ಪಾಂಡಿತ್ಯವಾಗಿ ಕಂಡುಬರಲಿಲ್ಲ.

ಆದಿಕಾಂಡ 1:2ರಲ್ಲಿ *ruach* ಪದದ ಸಂದರ್ಭವನ್ನು ಒಬ್ಬನು ಪರೀಕ್ಷಿಸುವಾಗ, *ruach* ಎಂಬುದು *'elohim* ಪದಕ್ಕೆ ಕೂಡಿಸಲ್ಪಟ್ಟು "the *ruach* of God" ಎಂದು ಸರಿಯಾದ ಸಂಬಂಧ ಮಾಡಿರುವುದು ಕಂಡುಬರುತ್ತದೆ. ಕೇವಲ "ಗಾಳಿ" ಎಂಬ ಅರ್ಥವಾಗಿದ್ದರೆ "ದೇವರ" ಎಂಬ ಮಾತು ಯಾಕೆ ಕೂಡಿಸಲ್ಪಟ್ಟಿತು? ಹಳೇ ಒಡಂಬಡಿಕೆಯಲ್ಲಿ *Ruach 'Elohim* ಎಂಬುದು ತೊಂಭತ್ನಾಲ್ಕು ಸಲ ಉಪಯೋಗಿಸಲ್ಪಟ್ಟಿದ್ದನ್ನು ಪರೀಕ್ಷಿಸುವಾಗ, ಆದಿಕಾಂಡ 1:2ರಲ್ಲಿ ಮಾತ್ರವೇ "ದೇವರ ಗಾಳಿ" ಎಂಬ ಭಾಷಾಂತರವು ಸರಿಯಾದ

ಸಾಧ್ಯತೆಯೆಂದು ಕಂಡು ಕೊಳ್ಳುವರು.[2]

ಹಳೇಒಡಂಬಡಿಕೆಯಇತರವಚನಗಳು(ಯೋಬ26:13ಣಿ*KJV*ಣಿಕೀರ್ತನೆ104:30) ಸೃಷ್ಟಿಯ ಕಾರ್ಯದೊಂದಿಗೆ ದೇವರ ಆತ್ಮನು ಸಂಬಂಧಿಸಿದ್ದಾನೆ: ಇದು "ದೇವರ ಆತ್ಮ" ಎಂಬುದು ಸರಿಯಾದ ಭಾಷಾಂತರವಾಗಿದೆ ಎಂಬುದನ್ನು ತೋರಿಸುತ್ತದೆ. ಇದಲ್ಲದೆ, ಆದಿಕಾಂಡ 1:26 *Ruach 'Elohim* ಮಾತಿನ ತಕ್ಷಣದ ಸಂದರ್ಭದಲ್ಲಿ ದೇವರಿಗೆ ಪಾಲುಗಾರನು ಇಲ್ಲವೇ ಆತನ ಸೃಷ್ಟಿಯ ಕಾರ್ಯದಲ್ಲಿ ಪಾಲುಗಾರರು ಇದ್ದರು ಎಂಬುದನ್ನು ಸೂಚಿಸುತ್ತದೆ: "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮಾನವನನ್ನು ಉಂಟುಮಾಡೋಣ."

ಆದಿಕಾಂಡ 1:2ರಲ್ಲಿ *ruach* ಎಂಬುದನ್ನು "ಗಾಳಿ" ಎಂದು ಭಾಷಾಂತರಿಸಲು ಬೈಬಲ್ ಮೂಲ ಪಾಠದಲ್ಲಿ ಯಾವ ಕಾರಣವೂ ಕಾಣದ್ದರಿಂದ ಮತ್ತು ತಕ್ಷಣದ ಹಾಗೂ ಸಾಮಾನ್ಯವಾದ ಪರಿಶುದ್ಧ ಬರಹದ ಸನ್ನಿವೇಶಗಳು "ಆತ್ಮ" ಎಂಬ ಅರ್ಥವನ್ನು ಅಪೇಕ್ಷಿಸುವದರಿಂದ ಆದಿಕಾಂಡ 1:2ರಲ್ಲಿ *Ruach 'Elohim* ಎಂಬುದು "ದೇವರ ಆತ್ಮ" ಎಂದು ಭಾಷಾಂತರಿಸಲ್ಪಡತಕ್ಕದ್ದು. ಅದರ ಪ್ರಕಾರವಾಗಿ *Ruach 'Elohim* ಎಂಬುದು ದೈವತ್ವದ ವಿವರಣೆಯಾಗಿ ತಿಳಿಯಲ್ಪಡಬಹುದು.

## "ದೇವರ ಆತ್ಮ" ಎಂಬ ವಾಕ್ಯದ ಪ್ರಾಮುಖ್ಯತೆ

"ದೇವರ ಆತ್ಮ" ಎಂಬುದಕ್ಕೆ ದೈವತ್ವದ ವಿವರಣಾತ್ಮಕ ಮಾತಿನಂತೆ ಕನಿಷ್ಠಪಕ್ಷ ಆರು ಪ್ರಾಮುಖ್ಯವಾದ ಅರ್ಥಗಳಿರುವವು.

1. *ದೈವತ್ವ.* ಆದಿಕಾಂಡ 1:2ರಲ್ಲಿ "ದೇವರ ಆತ್ಮ" ಎಂಬ ವಾಕ್ಯ ದೈವತ್ವದ ಒಬ್ಬ ಸದಸ್ಯನಿಗಿಂತ ಹೆಚ್ಚಾದ ಪ್ರಥಮ ಮಾಹಿತಿಯಾಗಿದೆ. ನಿಜವಾಗಿಯೂ, ಒಬ್ಬನೇ ದೇವರು ಆದಾಗ್ಯೂ ಆ ಒಬ್ಬ ದೇವರನ್ನು ಮಾಡುವ ಮೂರು "ವ್ಯಕ್ತಿಗಳು" ಇರುವುದು ಹೇಗೆ ಎಂಬುದನ್ನು ಯಾರು ಸಂಪೂರ್ಣವಾಗಿ ವಿವರಿಸಲಾರರು. ಆತನ ಗುಣಗಳು ಕಂಡು ಹಿಡಿಯಲ್ಪಡಲಾರದವುಗಳುಣಿ ದೇವರ ಆತ್ಮನು ಮಾತ್ರವೇ ದೈವತ್ವದ ಆಳವಾದ ಯೋಚನೆಗಳನ್ನು ತಿಳಿದಿರುವನು (1 ಕೊರಿಂಥ 2:10, 11). ಆತನ ಸೂಕ್ಷ್ಮ ಪದವನ್ನು ಕೇಳಿಸಿಕೊಳ್ಳುವುದು ಹೇಗಿರುವುದು (ಯೋಬ 26:14)!

ದೇವರ ಆತ್ಮನ ಬಗ್ಗೆ ಮಾನವರು ತಿಳಿದುಕೊಂಡದ್ದು ಅಮೂಲ್ಯವಾದದ್ದಾಗಿರುವುದು. ಎಲ್ಲಾ ಕಡೆಗಳಲ್ಲಿ ಆತನು ಇರುವಾತನಾಗಿದ್ದರೂ ಒಬ್ಬ ವ್ಯಕ್ತಿಯಾಗಿದ್ದಾನೆ. ಆತನಿಗೆ ಮನಸ್ಸಿದೆ (ರೋಮಾಪುರ 8:27)ಣಿ ಆತನು ಕೇಳುತ್ತಾನೆ ಮತ್ತು ಮಾತಾಡುತ್ತಾನೆ (ಯೋಹಾನ 16:13) ಮತ್ತು ಆತನು ಆಳವಾಗಿ ಭಾವಿಸುತ್ತಾನೆ (ಎಫೆಸ 4:30). ಆತ್ಮನು ಕ್ರೈಸ್ತರಲ್ಲಿ ವಾಸಿಸುತ್ತಾನೆ (ಗಲಾತ್ಯ 4:6) ಮತ್ತು ಪರಲೋಕದಲ್ಲಿ ಆತನು ಅವರಿಗಾಗಿ ಪ್ರಾರ್ಥಿಸುತ್ತಾನೆ (ರೋಮಾಪುರ 8:26, 27). ದೇವರ ಮಕ್ಕಳಾಗುವದಕ್ಕೆ ಆತನು ಪಾಪಿಗಳನ್ನು ಕರೆಯುತ್ತಾನೆ (ಪ್ರಕಟನೆ 22:17).

2. *ದೈವತ್ವದ ಸ್ವಭಾವ.* "ದೇವರ ಆತ್ಮ" ಎಂಬ ಮಾತು ದೈವತ್ವದ ಸ್ವಭಾವವನ್ನು ಚಿತ್ರಿಸುತ್ತಾನೆ. ಆತನು ಆತ್ಮಿಕ ಜೀವಿಯಾಗಿದ್ದಾನೆ (ಯೋಹಾನ 4:24). ಮಾಂಸವು ಎಲುಬುಗಳೂ ಆಲ್ಲ (ಲೂಕ 24:39), ಮಾಂಸವು ರಕ್ತವೂ ಅಲ್ಲ (1 ಕೊರಿಂಥ 15:50). ಆತ್ಮನಂತೆ ಆತನು ಮಾನವ ಕಣ್ಣುಗಳಿಗೆ ಅದೃಶ್ಯನು (ಕೊಲೊಸ್ಸೆ 1:15).

ಆತ್ಮನಿಗೆ ಮಾಂಸ ಹಾಗೂ ಎಲುಬುಗಳು ಇಲ್ಲದಿರುವದರಿಂದ, ದೇವರ ಮೂಗಿನ ಹೊಳ್ಳೆಗಳು, ಮುಖ, ಬೆನ್ನು, ಕಾಲುಗಳು, ಭುಜಗಳು, ಕೈಗಳು, ಕಿವಿಗಳು, ಕಣ್ಣುಗಳು,

ಕಣ್ಣುರೆಪ್ಪೆಗಳು ಮತ್ತು ರೆಕ್ಕೆಗಳು (ವಿಮೋಚನಕಾಂಡ 15:8ಣ 33:23ಣ 24:10ಣ ಧರ್ಮೋಪದೇಶಕಾಂಡ 33:27ಣ ಯೆಶಾಯ 59:1, 2ಣ ಕೀರ್ತನೆ 11:4ಣ 91:4) ಸಾಂಕೇತಿಕ ಮಾರ್ಗದಲ್ಲಿ ಮಾತ್ರವೇ ಅರ್ಥ ಮಾಡಿಕೊಳ್ಳಲ್ಪಡತಕ್ಕದ್ದು. ಧಾರ್ಮಿಕ ಬೋಧಕರು ಆತನಿಗೆ "ಮನುಷ್ಯನಿಗೆ ನಿಜವಾಗಿ ಇರುವಂತೆ ಮಾಂಸ ಹಾಗೂ ಎಲುಬುಗಳು" ಇರುತ್ತವೆ[3] ಎಂದು ಬರೆಯುವದರಲ್ಲಿ ದೈವತ್ವದ ಬಗ್ಗೆ ತಪ್ಪುಮಾಡುವುದು. ದು   ಖಕರವಾದದ್ದಾಗಿದೆ.

3. *ನೋಡಿದ್ದು ಮತ್ತು ನೋಡದಿರುವಂಥದ್ದು.* "ದೇವರ ಆತ್ಮ" ಎಂಬ ವಾಕ್ಯದ ಉಪಯೋಗವು ಯಾವುದೇ ಸಮಯದಲ್ಲಿ ಯಾವುದೇ ಮನುಷ್ಯನು ಯಾಕೆ ದೇವರನ್ನು ನೋಡಿಲ್ಲ ಹಾಗೂ ಮನುಷ್ಯನು ಯಾಕೆ ಆತನನ್ನು ನೋಡಲಾರನು ಎಂಬುದನ್ನು ವಿವರಿಸುತ್ತದೆ (ವಿಮೋಚನಕಾಂಡ 33:20ಣ ಯೋಹಾನ 1:18ಣ 1 ತಿಮೊಥೆ 6:16). ಆತ್ಮವು ಅದೃಶ್ಯವಾದದ್ದಾಗಿದೆ (ಕೊಲೊಸ್ಸೆ 1:15)ಣ ಆದುದರಿಂದ ಮಾನವ ಕಣ್ಣುಗಳು ದೈವತ್ವದ ತಿರುಳನ್ನು ಎಂದೂ ಗಮನಿಸಿರುವದಿಲ್ಲ.

ಹೀಗಿದ್ದರೂ, ದೇವರಿಗೆ ಎಲ್ಲಾ ಸಂಗತಿಗಳು ಸಾಧ್ಯವಾಗಿವೆ. ದೈಹಿಕ ಮಾರ್ಗದಲ್ಲಿ ತನ್ನನ್ನು ತೋರಿಸಿಕೊಳ್ಳುವುದು ಆತನಿಗೆ ಸಣ್ಣ ಸಂಗತಿಯಾಗಿದೆ ಅಬ್ರಾಮನಿಗೆ ಅವನ ಡೇರೆಯ ಬಾಗಿಲಲ್ಲಿ ಮನುಷ್ಯನಂತೆ (ಆದಿಕಾಂಡ 18:1), ಮೋಶೆಗೆ ಬೆಂಕಿಯಂತೆ (ವಿಮೋಚನ ಕಾಂಡ 3:2), ಇಸ್ರಾಯೇಲ್ಯರಿಗೆ ದಟ್ಟವಾದ ಮೋಡದಂತೆ (ವಿಮೋಚನಕಾಂಡ 19:9), ಎಲೀಯನಿಗೆ ಧ್ವನಿಯಂತೆ (1 ಅರಸು 19:13), ಹಾಗೂ "ಇಮ್ಮಾನುವೇಲ್" ಎಂದು ಕರೆಯಲ್ಪಟ್ಟ ಒಬ್ಬ ವ್ಯಕ್ತಿಯಲ್ಲಿ ಮಾನವನಂತೆ (ಮತ್ತಾಯ 1:23ಣ ಯೋಹಾನ 14:9) ಕಾಣಿಸಿಕೊಂಡನು. ಮಾನವ ಕಣ್ಣುಗಳು ದೇವರನ್ನು ಈ ದೈಹಿಕ ರೂಪಗಳಲ್ಲಿ ಕಂಡವು. ಆದರೆ ದೇವತ್ವದ ತಿರುಳು *ruach*, ಆತ್ಮವು - ಮಾನವರಿಂದ ನೋಡಲಸಾಧ್ಯವಾಗಿದೆ.

4. *ಮರ್ತ್ಯನಲ್ಲ.* "ದೇವರು ಆತ್ಮ" ಎಂಬ ವಾಕ್ಯದಲ್ಲಿ ಇನ್ನೊಂದು ಪ್ರಮುಖವಾದ ಅರ್ಥವು ದೈವತ್ವವು ಮರ್ತ್ಯವಾದದ್ದಲ್ಲ. ದೇವರು ಮೂಲತತ್ವದಲ್ಲಿ ಮಾಂಸ ಮತ್ತು ರಕ್ತವಾಗಿದ್ದರೆ, ಆತನ ಮೃತ ಪ್ರಾಯನಾಗಿರುತ್ತಿದ್ದನು. ಆದುದರಿಂದ ಆತನು ಸಾಯಬಹುದಿತ್ತು. ಆತನ ಸ್ವಭಾವವು ಆತ್ಮನಾಗಿದ್ದರಿಂದ ಆತನು ನಾಶವಾಗದವನಾಗಿದ್ದಾನೆ (1 ಕೊರಿಂಥ 15:50). ಆತನು ಮಾತ್ರವೇ ಅಮರತ್ವವನ್ನು ಹೊಂದಿಕೊಂಡಿದ್ದಾನೆ (1 ತಿಮೊಥೆ 6:16).[4]

5. *ಸ್ಥಳಿಕನಲ್ಲ.* ದೇವರ ಆತ್ಮನು ಸ್ಥಳಿಕನಾಗಿ ಮಾಡಲ್ಪಡಲಾರನು. ಆತನ ಪ್ರತ್ಯಕ್ಷತೆಗಳು ಸ್ಥಳದಲ್ಲಿ ಇಡಲ್ಪಟ್ಟಿವೆ (ಆದಿಕಾಂಡ 18:33)ಣ ಆದರೆ ದೇವರ ಮೂಲ ಸ್ವಭಾವವು ಆತ್ಮ ಜೀವಿಯಾಗಿದ್ದರಿಂದ ಒಂದು ಸ್ಥಳಕ್ಕೆ ಮಿತಿಗೊಳ್ಳಲ್ಪಟ್ಟಿರುವದಿಲ್ಲ. ಯಾವುದೇ ಪರ್ವತ ಇಲ್ಲವೇ ಆಲಯ - ಉನ್ನತ ಪರಲೋಕವು ಸಹ - ಆತನನ್ನು ಒಳಗೊಂಡಿರಲಾರದು (1 ಅರಸು 8:27). ದೇವರು ಅಲ್ಲಿ ಇಲ್ಲ ಎಂದು ಹೇಳಲ್ಪಡಬಹುದಾದ ಯಾವುದೇ ಸ್ಥಳವು ಅಸ್ತಿತ್ವದಲ್ಲಿರುವದಿಲ್ಲ (ಕೀರ್ತನೆ 139:7-12).

6. ಮಾನವನ ಸ್ವಭಾವದ ವಿವರಣೆ "ದೇವರ ಆತ್ಮ" ಎಂಬ ಪದಗಳು ಮನುಷ್ಯನು ದೇವರ ಸ್ವರೂಪದಲ್ಲಿ ಹೇಗೆ ಮಾಡಲ್ಪಟ್ಟಿದ್ದಾನೆ ಎಂಬುದನ್ನು ವಿವರಿಸಲು ಸಹಾಯ ಮಾಡುವುದು. ದೇವರು ಆತ್ಮನಾಗಿದ್ದರೆ, ಆಗ ಮಾನವನಲ್ಲಿ ಆತನ ಸ್ವರೂಪವೂ ಸಹ ಆತ್ಮವಾಗಿರುವುದು, ನಮ್ಮ ದೇಹಗಳು ನಮ್ಮ ತಂದೆ ತಾಯಿಗಳಿಂದ ಬರುವವು ಹಾಗೂ ಅಂತಿಮವಾಗಿ ನೆಲದಿಂದ ಬಂದಿರುವವು: ಆದರೆ ನಮ್ಮಲ್ಲಿ ಪ್ರತಿಯೊಬ್ಬರಿಗೆ *ruach* ಆತ್ಮವನ್ನು ರೂಪಿಸುವಾತನು ದೇವರು (ಜೆಕರ್ಯ 12:1). ಆತನು ನಮ್ಮ ಆತ್ಮಗಳ ತಂದೆಣ ಆತನಿಂದ ನಮ್ಮ ಆತ್ಮಗಳು ಬರುವವು. ಹಾಗೂ ಆತನ ಬಳಿಗೆ ಹೋಗುವವು (ಪ್ರಸಂಗಿ 12:7ಣ ಇಬ್ರಿಯ 12:9). ಮನುಷ್ಯನ ದೇಹವು ಮಹತ್ವವುಳ್ಳದ್ದು, ಅವನಿಗಿರುವವರೆಗೆ

ಪವಿತ್ರಾತ್ಮವಾದದ್ದು ಆಗಿರುವುದು (1 ಕೊರಿಂಥ 6:19, 20). ಅದು ದೇವರ ಸ್ವರೂಪದಲ್ಲಿ ಮಾಡಲ್ಪಟ್ಟ ಮಾನವನ ನಿಜವಾದ ಸ್ವಭಾವವಲ್ಲ.

ಮಾಂಸವು ಯಾವುದರ ಲಾಭಪಡೆಯುವದಿಲ್ಲಣಿ ಜೀವಕೊಡುವಾತನು ಆತ್ಮನು (ಯೋಹಾನ 6:63). "ಭೋಜನ ಪದಾರ್ಥಗಳು ಹೊಟ್ಟೆಗಾಗಿಯು ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಇವೆಣಿ ದೇವರು ಇವೆರಡನ್ನೂ ಕೂಡ ತೆಗೆದು ಹಾಕುವನು: ಆದರೂ ದೇಹವು ಜಾರತ್ವಕ್ಕಾಗಿರುವಂಥದ್ದಲ್ಲ. ಕರ್ತನಿಗೋಸ್ಕರವಾಗಿದೆಣಿ ಕರ್ತನು ದೇಹಕ್ಕೋಸ್ಕರ ಇದ್ದಾನೆ" (1 ಕೊರಿಂಥ 6:13) ಮನುಷ್ಯನ ಆತ್ಮವು, ದೇವರ ಆತ್ಮದಂತೆ ಮಾಡಲ್ಪಟ್ಟಿದ್ದ ಭಾಗವು ಮಾತ್ರವೇ ಉಳಿದುಕೊಳ್ಳುತ್ತದೆ.

"ದೇವರ ಆತ್ಮ" ಎಂಬ ವಾಕ್ಯ ದೇವತ್ವದ ಅಗತ್ಯವಾದ ಸ್ವಭಾವವನ್ನು ಚಿತ್ರೀಕರಿಸುವದರಿಂದ ದೈವತ್ವವನ್ನು ಸ್ಪಷ್ಟಪಡಿಸಲು ಸಹಾಯ ಮಾಡುತ್ತದೆ. ದೇವರು ನೋಡಲ್ಪಟ್ಟಿದ್ದಾನೆ ಆದಾಗ್ಯೂ ಆತನು ನೋಡಲ್ಪಟ್ಟಿರುವದಿಲ್ಲ ಎಂದು ಬೈಬಲ್ ಹೇಗೆ ಹೇಳುತ್ತದೆಂಬುದನ್ನು ಇದು ವಿವರಿಸುತ್ತದೆ. ದೇವರು "ಆತ್ಮನು" ಆಗಿರುವ ಸಂಗತಿಯು ಆತನು ಯಾಕೆ ಸಾಯಲಾರನು ಮತ್ತು ಯಾಕೆ ಆತನು ಸ್ಥಳಿಕವಾಗಿ ಇಡಲ್ಪಡನು ಎಂಬುದನ್ನು ಸಹ ಹೇಳುತ್ತದೆ. ದೇವರ ಸ್ವರೂಪದಲ್ಲಿ ಮನುಷ್ಯನ ಯಾವ ಭಾಗವು ಮಾಡಲ್ಪಟ್ಟಿದೆ ಎಂಬುದನ್ನು ಅದು ತೋರಿಸುತ್ತದೆ.

ದೇವರ ಆತ್ಮನು ಸೃಷ್ಟಿಯ ಭಾಗದಂತೆ ವಿಶ್ವದ (ಆದಿಕಾಂಡ 1:2ಣಿ ನೋಡಿರಿ ಯೋಬ 26:13ಣಿ ಕೀರ್ತನೆ 104:30) ಮತ್ತು ಮನುಷ್ಯನ (ಆದಿಕಾಂಡ 1:2, 26ಣಿ ಯೋಬ 33:4) ಭಾಗವಾಗಿ ನೋಡಲ್ಪಟ್ಟಿದ್ದಾನೆ.

---

ಟಿಪ್ಪಣಿಗಳು

[1]ಕೀರ್ತನೆ 146:4ರಲ್ಲಿ (KJV ) ಯಲ್ಲಿ "ಉಸಿರು" KJV ಎಂದದೆ. [2]ಉದಾಹರಣೆಯಾಗಿ ನೋಡಿರಿ: ವಿಮೋಚನಕಾಂಡ 31:3ಣಿ ಅರಣ್ಯಕಾಂಡ 24:2ಣಿ 1 ಸಮುವೇಲ 10:10ಣಿ 2 ಪೂರ್ವಕಾಲವೃತ್ತಾಂತ 15:1. "ನನ್ನ ಆತ್ಮ" (ಆದಿಕಾಂಡ 6:3) ಎಂಬುದು "ದೇವರ ಶ್ವಾಸವು" (ಯೋಬ 27:3) ಎಂದಿರಬಹುದು. [3]Joseph Smith Jr., *Doctrine and Covenants* (Salt Lake City: The Church of Jesus Christ of Latter-day Saints, 1974), 130:22. [4]ಒಂದು ಅರ್ಥದಲ್ಲಿ, ಪ್ರಾಣಿಗಳಿಗೆ *ruach* ಇರುತ್ತದೆ (ಪ್ರಸಂಗಿ 3:21). ಬಹುಶ ಅದರ ಅರ್ಥ "ಉಸಿರು" ಇಲ್ಲವೇ "ಪ್ರಾಣ," ಆದರೆ ಅವು ಅಮರತ್ವವನ್ನು ಹೊಂದಿಕೊಂಡಿರುವದಿಲ್ಲ.